# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 16.01.2021 ರ
## ಸಭಾ ನಡುವಳಿ

ದಿನಾಂಕ: 16.01.2021 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಬಿಬಿಎಂಪಿ ಸಮುದಾಯ ಭವನ, ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ಇಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್ ಶ್ರೀಧರ್ | ನೋಡಲ್ ಅಧಿಕಾರಿ, ವಾರ್ಡ್ ನಂ. 06(ಥಣಿಸಂದ್ರ) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀ ಸುರೇಶ್ ದೇವತ್‌ರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ. 06 (ಥಣಿಸಂದ್ರ) |
| 3 | ಶ್ರೀಮತಿ ಡಾ|| ಕೇಶವಪಾಣಿ | ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಹೆಗಡೆನಗರ |
| 4 | ಶ್ರೀ ಕಿರಣ್ | ಸಹಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ |
| 5 | ಶ್ರೀ ಮಂಜುನಾಥ್. ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು, |
| 6 | ಶ್ರೀ ವೆಂಕಟೇಶ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |

ಶ್ರೀ ಸುರೇಶ್ ದೇವತ್‌ರಾಜ್, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ವಾರ್ಡ್ ಅಭಿಯಂತರರು ವಾರ್ಡ್ ನಂ. 06 ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು, ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್–19ರ ಸಂಬಂಧ ಮುಜಾಗೃತ ಕ್ರಮಗಳ ಬಗ್ಗೆ.** ಡಾ|| ಕೇಶವಪಾಣಿ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಪ್ರೇಮ್ ಕುಮಾರ್ ರವರು ಮೊದಲನೇ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡುವ ಸಂಬಂಧ ಕಾರ್ಯನಿಮಿತ್ತ ಆರೋಗ್ಯ ಇಲಾಖೆಗೆ ಹೋಗಿರುತ್ತಾರೆಂದು ಸಭೆಗೆ ತಿಳಿಸಿದರು. ಮೊದಲನೇ ಹಂತದಲ್ಲಿ ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ಲಸಿಕೆ ನೀಡಲು ದಿನಾಂಕ: 17.01.2021 ಹಾಗೂ 18.01.2021 ರಂದು ನಿಗಧಿಪಡಿಸಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿ ಹೆಗಡೆನರ ಸಮುದಾಯಭವನ, ಥಣಿಸಂದ್ರ ಸರ್ಕಾರಿ ಶಾಲೆ ಹಾಗೂ ದಾಸರಹಳ್ಳಿ ಸರ್ಕಾರಿ ಶಾಲೆ ಸ್ಥಳಗಳನ್ನು ಆಯ್ಕೆ ಮಾಡಲಾಗಿದ್ದು ಈ ಲಸಿಕಾ ಕೇಂದ್ರ ಹಾಗೂ ಹೆಗಡೆನಗರ ಆರೋಗ್ಯ ಪ್ರಾಥಮಿಕ ಕೇಂದ್ರಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಸೂಚಿಸಿರುತ್ತಾರೆ. ಎಂದು ವಾರ್ಡ್ ಸಮಿತಿ ಸಭೆಗೆ ಕಾರ್ಯದರ್ಶಿಯವರು ಹಾಗೂ ಸ.ಅ ರವರು ತಿಳಿಸಿದರು.

2. **ದಾಸಪ್ಪ, ಸಂಯುಕ್ತ ಗೆಳೆಯರ ಬಳಗ ಹೆಗಡೆನಗರ:** ರವರು ಮಾತನಾಡಿ

    1. ಹೆಗಡೆನಗರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಘನತ್ಯಜ್ಯ ಸಂಗ್ರಹಣೆ ಹಾಗೂ ವಿಲೇವಾರಿ ಸರಿಯಾಗಿ ಮಾಡುತ್ತಿಲ್ಲ ಅದುದರಿಂದ ಹೆಗಡೆನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಹತ್ತಿರ ಕಸದ ರಾಶಿ ಬಿದ್ದಿರುತ್ತದೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ನೋಡೆಲ್ ಅಧಿಕಾರಿಯವರು ಈ ಬಗ್ಗೆ ಅಧೀಕ್ಷಕ ಅಭಿಯಂತರರಿಗೆ ಪತ್ರ ಬರೆಯುವಂತೆ ಸೂಚಿಸಿದರು.
    2. ವಾರ್ಡ್ ವ್ಯಾಪ್ತಿಯಲ್ಲಿ ಕೊಳವೆ ಬಾವಿಗಳ ವಿಫಲ, ಚಾಲ್ತಿಯಲ್ಲಿರುವ ಹಾಗೂ ಚಾಲ್ತಿಯಲ್ಲಿರದ ಕೊಳವೆಬಾವಿಗಳ ವಿವರಗಳನ್ನು ನೀಡುವಂತೆ ಕೋರಿದರು.
    3. ಯಲಹಂಕ ಯೋಜನಾ ವಿಭಾಗದಿಂದ ಶಬರಿನಗರ ಮುಖ್ಯರಸ್ತೆಯಲ್ಲಿ ನಿರ್ವಹಿಸುತ್ತಿರುವ ಕಾಮಗಾರಿಯಲ್ಲಿ 1ನೇ ಅಡ್ಡರಸ್ತೆಯಲ್ಲಿನ ಸಮಸ್ಯೆ ಬಗೆಹರಿಸಲು ಹಾಗೂ 7 ರಿಂದ 9ನೇ ಅಡ್ಡರಸ್ತೆವರೆಗೆ ಚರಂಡಿ ನಿರ್ಮಾಣ ಕಾಮಗಾರಿಯನ್ನು ತುರ್ತಾಗಿ ಪೂರ್ಣಗೊಳಿಸಲು ಕೋರಿದರು.
    4. ಥಣಿಸಂದ್ರ ಮುಖ್ಯರಸ್ತೆಯಲ್ಲಿ ಕಾಮಗಾರಿ ನಡೆಯುತ್ತಿದ್ದು, ಸದರಿ ಕಾಮಗಾರಿಗೆ ಸಂಬಂಧಿಸಿದ ಸಹಾಯಕ ಅಭಿಯಂತರರು ಈ ಸಭೆಗೆ ಹಾಜರಾಗಿರುವುದಿಲ್ಲವೆಂದು ತಿಳಿಸಿದರು.

3. **ಶ್ರೀನಿವಾಸ್‌ರಾವ್** ರವರು ಮಾತನಾಡಿ

    1. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳಲ್ಲಿ ಹೆಚ್ಚಾಗಿ ಪ್ಲಾಸ್ಟಿಕ್ ಬಿಳುತ್ತಿದ್ದು, ಸದರಿ ವಿಷಯದ ಬಗ್ಗೆ ಗಂಬೀರವಾಗಿ ಪರಿಗಣಿಸಿ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಸೀಜ್ ಮಾಡಲು ಕ್ರಮ ವಹಿಸಲು ಕೋರಿದರು.
    2. ವಾರ್ಡ್ ಸಮಿತಿಯನ್ನು ಸಾರ್ವಜನಿಕರು ಹಾಗೂ ಬಡಾವಣೆನಿವಾಸಿಗಳ ಸಂಘದವರು ನೀಡುತ್ತಿರುವ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಯವತಿಯಿಂದ ಕ್ರಮ ವಹಿಸಿ ಮುಂದಿನ ಸಭೆಗೆ ಮಾಹಿತಿ ನೀಡಬೇಕಾಗಿ ಕೋರಿದರು.

4. **ಶ್ರೀ ಶಿವಣ್ಣ ಹೆಗಡೆನಗರ** ರವರು ಮಾತನಾಡಿ

    1. ಹೆಗಡೆನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿರುವುದರಿಂದ ಕೂಡಲೇ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿದರು ಹಾಗೂ ನಾರಾಯಣಪುರ ಕ್ರಾಸ್‌ನಿಂದ ರೈಲ್ವೆಗೇಟ್‌ಗೆ ಹೋಗುವ ಜಿ.ಕೆ.ವಿ.ಕೆ ಡಬಲ್ ರಸ್ತೆಯಲ್ಲಿ ಸಂಗ್ರಹಣೆಯಾಗಿರುವ ಘನತ್ಯಾಜ್ಯವನ್ನು ವಿಲೇವಾರಿ ಮಾಡಲು ಕೋರಿದರು.

5. **ಶ್ರೀ ರಾಜಗೋಪಾಲ್ ಭಾಗ್ಯಶ್ರೀ ಬಡಾವಣೆ ರವರ ಮಾತನಾಡಿ** ಭಾಗ್ಯಶ್ರೀ ಬಡಾವಣೆಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮಾಡಲು ಆಟೋಗಳು ಸರಿಯಾಗಿ ಬರುತ್ತಿಲ್ಲವೆಂದು ಸಭೆಗೆ ತಿಳಿಸಿದರು.

6. **ಶ್ರೀಮತಿ ಪೂರ್ಣಿಮಾ ಭುವನೇಶ್ವರಿನಗರ** ರವರು ಮಾತನಾಡಿ:

    1. ಭುವನೇಶ್ವರಿನಗರ 11ನೇ, 12ನೇ ಮತ್ತು 13ನೇ ಅಡ್ಡರಸ್ತೆಯಲ್ಲಿ ಬಾಕಿ ಇರುವ ಒಳಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಲು ಕೋರಿದರು.
    2. ಬ್ಲಾಕ್ ಸ್ಪಾಟ್‌ಗಳು ಹೆಚ್ಚಾಗುತ್ತಿದ್ದು ಕ್ರಮ ವಹಿಸಲು ಕೋರಿದರು.
    3. ಭುವನೇಶ್ವರಿನಗರದ ಉದ್ಯಾನವನದಲ್ಲಿ ವ್ಯಾಯಾಮ ಸಲಕರಣೆಗಳನ್ನು ಅಲವಡಿಸಲು ಕ್ರಮ ವಹಿಸುವಂಥೆ ಕೋರಿದರು.
    4. 11ನೇ ಅಡ್ಡರಸ್ತೆಯಲ್ಲಿ ಪಾದಚಾರಿ ಮಾರ್ಗ ಒತ್ತುರಿಯನ್ನು ತೆರವುಗೊಳಿಸುವಂತೆ ಕೋರಿದರು.
    5. 14ನೇ ಅಡ್ಡರಸ್ತೆಯಲ್ಲಿ ಆರ್.ಸಿ.ಸಿ ಚರಂಡಿ ನಿರ್ಮಾಣ ಮಾಡಲು ಕೋರಿದರು.

7. **ಶಬರಿನಗರ ನಿವಾಸಿ** ರವರು ಮಾತನಾಡಿ: ಘನತ್ಯಾಜ್ಯ ಸಂಗ್ರಹಣೆ ಹಾಗೂ ವಿಲೇವಾರಿ ಸಮಪರ್ಕವಾಗಿ ಆಗುತ್ತಿರುವುದಿಲ್ಲವೆಂದು ತಿಳಿಸಿದರು ಹಾಗೂ ಶಬರಿನಗರ ಬಡಾವಣೆ ನಿರ್ಮಾಣದ ಸಮಯದಲ್ಲಿ ಅಳವಡಿಸಿರುವ ಒಳಚರಂಡಿಯ ಕೊಳವೆಗಳನ್ನು ಮುಂದುವರೆಸುವುದಾಗಿ ಹೊಸದಾಗಿ ಒಳಚರಂಡಿ ಪೈಪ್‌ಲೈನ್ ಅಳವಡಿಸಿರುವುದಿಲ್ಲ ಆದುದರಿಂದ ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ಸ್ಪಷ್ಟವಾಗಿ ಸಭೆಗೆ ತಿಳಿಸಲು ಕೋರಿದರು.

8. ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳ ನಿರ್ವಹಣೆ ಹಾಗೂ ಚರಂಢಿಗಳಲ್ಲಿ ತುಂಬಿರುವ ಹೂಳನ್ನು ತೆಗೆದು ವಿಲೇವಾರಿ ಮಾಡಲು ಹಾಗೂ ಕುಡಿಯುವ ನೀರನ ಅಭಾವ ವಿರುವ ಪ್ರದೇಶಗಳಲ್ಲಿ ಟ್ಯಾಂಕರ ಮುಖಾಂತರ ನೀರು ಸರಬರಾಜು ಮಾಡಲು ಈಗಾಗಲೇ ನಿಯೋಜನೆ ಮಾಡಲಾಗಿರುವ ಗುತ್ತಿಗೆದಾರರ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುವುದರಿಂದ ಸಾರ್ವಜನಿಕರ ದೂರುಗಳೀಗೆ ಸ್ಪಂದಿಸಿ ದೂರುಗಳನ್ನು ಬಗೆಹರಿಸಲು ಹಾಗೂ ಕುಡಿಯುವ ನೀರಿನ ಅಭಾವವಿರುವ ಪ್ರದೇಶಗಳಲ್ಲಿ ನೀರಿನ ಸರಬರಾಜು ಮಾಡಲು ಸಾಧ್ಯವಾಗುತ್ತಿರುವುದಿಲ್ಲವೆಂದು ಹಾಗೂ 2020-21ನೇ ಸಾಲಿನ ಕ್ರಿಯಾ ಯೋಜನೆಗೆ ಇಲ್ಲಿಯವರೆವಿಗೂ ಕೇಂದ್ರ ಕಛೇರಿಯಿಂದ ಅನುಮೋದನೆ ಹಾಗೂ ಜಾಬ್ ಸಂಖ್ಯೆಗಳನ್ನು ನೀಡಿರುವುದಿಲ್ಲವೆಂದು ಸ.ಅ ರವರು ತಿಳಿಸಿದರು, ಸದರಿ ವಿಷಯದ ಬಗ್ಗೆ ನೊಡೆಲ್ ಅಧಿಕಾರಿಯವರು ಈ ಬಗ್ಗೆ ಪರಿಶೀಲಿಸಿ ಟ್ರಾಕ್ಟರ್ ವಾಹನ, ಜೆ.ಸಿ.ಬಿ ಹಾಗೂ ಕೂಲಿ ಆಳುಗಳನ್ನು ಹಾಗೂ ನೀರಿನ ಟ್ಯಾಂಕರ್ ವಾಹನವನ್ನು ಹೊರಗುತ್ತಿಗೆಯಿಂದ ಪಡೆದು ಕಾಮಗಾರಿಯನ್ನು ನಿರ್ವಹಿಸಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾ ದೂರು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

16/11/2021
ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06, (ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.